# ಜಾಕ್ ಮತ್ತು ಜಾಕ್‌ಪಾಟ್

ಪ್ರೈಮರಿ ಸ್ಕೂಲಲ್ಲಿ ಎರಡು ಬಾರಿ, ಮಿಡ್ಲ್‌ಸ್ಕೂಲಲ್ಲಿ ಮೂರು ಬಾರಿ ಫೇಲ್ ಆದಾತ ಮುಂದೆ ಏನಾಗಬಹುದು? ಈ ಪ್ರಶ್ನೆ ಕೇಳಿದರೆ, ಚೀನಾದ ಜಾಕ್ ಮಾ ನಕ್ಕುಬಿಡುತ್ತಾರೆ. ಏಕೆಂದರೆ ಅವರೀಗ ಚೀನಾದ ಅತ್ಯಂತ ದೊಡ್ಡ ಶ್ರೀಮಂತ ಉದ್ಯಮಿ. ಜಗತ್ತಿನಾದ್ಯಂತ ಇ-ಕಾಮರ್ಸ್‌ನಲ್ಲಿ ಮುಂಚೂಣಿಯಲ್ಲಿರುವ ಆಲಿಬಾಬಾ.ಕಾಮ್ ಕಂಪೆನಿಯ ಎಕ್ಸಿಕ್ಯೂಟಿವ್ ಚೇರ್‌ಮನ್! ಚಿಕ್ಕಂದಿನಲ್ಲಿ ಫೇಲ್ ಆದದ್ದು ಮಾತ್ರವಲ್ಲ, ಮುಂದೆ ಯುವಕನಾಗಿದ್ದಾಗ ಹಾರ್ವರ್ಡ್ ಯೂನಿವರ್ಸಿಟಿಯಲ್ಲಿ ಪ್ರವೇಶ ಪಡೆಯಲು ಪ್ರಯತ್ನಿಸಿ ಹತ್ತು ಸಲವೂ ವಿಫಲವಾದಾತ ಈ ಜಾಕ್ ಮಾ. ಹಾಗೆಂದು ಈತನಿಗೆ ಬೇಜಾರೇನಿಲ್ಲ. ಏಕೆಂದರೆ ಹಾರ್ವರ್ಡ್ ಯೂನಿವರ್ಸಿಟಿ ತನ್ನ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ನೀಡಲು ಇತ್ತೀಚಿನ ವರ್ಷಗಳಲ್ಲಿ ಈತನನ್ನೇ ಹಲವು ಸಲ ಕರೆಸಿಕೊಂಡಿದೆ!

ಚೀನಾದ ಹಾಂಗ್ಝೋದಲ್ಲಿ ಬಡ ಕುಟುಂಬದಲ್ಲಿ ಹುಟ್ಟಿದಾತ ಈ ಮಾ ಯೂನ್. ಅಪ್ಪ-ಅಮ್ಮ ಸಂಗೀತದ ಮೂಲಕ ಕಥೆ ಹೇಳುತ್ತಿದ್ದ ಜಾನಪದ ಕಲಾವಿದರು. ಚಿಕ್ಕಂದಿನಲ್ಲೇ ಇಂಗ್ಲಿಷ್ ಕಲಿಯುವ ಹುಚ್ಚು ಹಿಡಿಸಿಕೊಂಡ ಮಾ ಯೂನ್, ನಗರದಲ್ಲಿ ವಿದೇಶೀಯರನ್ನು ಹುಡುಕಿಕೊಂಡು ಬೈಕ್ ಮೇಲೆ ತಿರುಗುತ್ತಿದ್ದ. ವಿದೇಶೀಯರಿಗೆ ಪುಕ್ಕಟೆಯಾಗಿ ನಗರ ಸುತ್ತಾಡಿಸುತ್ತಾ ಅವರ ಜತೆ ಬೆರೆತು, ಇಂಗ್ಲಿಷ್ ಕಲಿತುಕೊಂಡ. 9 ವರ್ಷಗಳ ಕಾಲ ಈತ ಸಿಟಿ ಗೈಡ್ ಆಗಿ ಕೆಲಸ ಮಾಡಿದ್ದು ಸಾಕಷ್ಟು ಜ್ಞಾನ ಸಂಪಾದನೆಗೆ ದಾರಿಯಾಯಿತು. ಈತನ ಹೆಸರು ಉಚ್ಚರಿಸುವುದು ಕಷ್ಟವೆಂದು ವಿದೇಶಿ ಪ್ರವಾಸಿಗನೊಬ್ಬ ಇಟ್ಟ ಹೆಸರೇ ಜಾಕ್. ಅದೇ ಈಗ ನಿಜನಾಮಧೇಯವಾಗಿದೆ. ಮಾ ಅನ್ನುವುದು ಸರ್‌ನೇಮ್.

ಕಷ್ಟಪಟ್ಟು ಶಿಕ್ಷಕ ಪದವಿ ಪಡೆದ ಜಾಕ್, ಕಾಲೇಜೊಂದರಲ್ಲಿ ಇಂಗ್ಲಿಷ್ ಕಲಿಸತೊಡಗಿದ. ಬಳಿಕ ಸ್ಥಳೀಯ ಬಿಸಿನೆಸ್ ಕಾಲೇಜಿನಲ್ಲಿ ಪದವಿ ಪಡೆದ. ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘದ ನಾಯಕನಾಗಿದ್ದು ನಾಯಕತ್ವದ ಗುಣವನ್ನೂ ಬೆಳೆಸಿಕೊಂಡ. ಆಗಲೇ ಇಂಟರ್‌ನೆಟ್ ಬಗ್ಗೆ ಕುತೂಹಲ ಹುಟ್ಟಿದ್ದು. ಅಂತರ್ಜಾಲದಲ್ಲಿ ಚೀನಾ ಬಹಳ ಹಿಂದುಳಿದ ದೇಶ ಎನ್ನುವುದನ್ನು ಕಂಡುಕೊಂಡ ಜಾಕ್, ತಾನೇಕೆ ಒಂದು ಅಂತರ್ಜಾಲ ತಾಣವನ್ನು ಆರಂಭಿಸಬಾರದು ಎಂದು ಯೋಚಿಸಿದ್ದೇ ಇ-ಕಾಮರ್ಸ್‌ನ ಸಾಹಸವೊಂದಕ್ಕೆ ಕಾರಣವಾಯಿತು.



ಅದು 1995. ಅಮೆರಿಕದಲ್ಲಿರುವ ತನ್ನ ಗೆಳೆಯರನ್ನು ಭೇಟಿ ಮಾಡಿದ ಜಾಕ್, ಇಂಟರ್‌ನೆಟ್ ಪ್ರವೇಶಿಸುವುದನ್ನು ಕಲಿತುಕೊಂಡ. ಆತ ಮೊದಲು ಹೊಡೆದ ಶಬ್ದ **beer**. ಜಗತ್ತಿನ ವಿವಿಧ ದೇಶಗಳಿಂದ ಈ ಶಬ್ದದ ಬಗ್ಗೆ ವಿವರಗಳು ಲಭ್ಯವಾದವು. ಆದರೆ ಚೀನಾದಿಂದ ಒಂದೇ ಒಂದು ಮಾಹಿತಿಯೂ ಇರಲಿಲ್ಲ. ಚೀನಾದ ಅಂತರ್ಜಾಲ ಕಲಿಕೆಯ ಹಿನ್ನಡೆಗೆ ಅಚ್ಚರಿಗೊಂಡ ಜಾಕ್, ಗೆಳೆಯರ ಬೆನ್ನು ಹತ್ತಿ ಚೀನಾ ಕುರಿತ ಸ್ವಂತ ವೆಬ್‌ಸೈಟ್ ಒಂದನ್ನು ಆರಂಭಿಸಿದ. ಅದೊಂದು ಅರೆಬರೆ ಪ್ರಯತ್ನವಾಗಿತ್ತು. ‘ಅವತ್ತು ಅರ್ಧ ಪುಟ ಡೌನ್‌ಲೋಡ್ ಆಗಲು ಮೂರೂವರೆ ಗಂಟೆ ಕಾದೆವು. ಆದರೆ ಆಗ ಅದೇ ದೊಡ್ಡ ಸಾಧನೆ. ಕುಡಿದು ಕುಣಿದು ಕುಪ್ಪಳಿಸಿದೆವು’ ಎಂದು ಜಾಕ್ ಮಾ ಹಾರ್ವರ್ಡ್ ವಿದ್ಯಾರ್ಥಿಗಳ ಜತೆಗೆ ತನ್ನ ಸಾಹಸವನ್ನು ಹಂಚಿಕೊಂಡಿದ್ದಾನೆ.

ಶಿಕ್ಷಕ ಪದವಿ ಪಡೆಯುವಾಗಲೇ ಪರಿಚಯವಾಗಿದ್ದ ಗೆಳತಿಯನ್ನು ಮದುವೆಯಾದ ಜಾಕ್, ಬಳಿಕ ಹೆಂಡತಿ ಮತ್ತು ಸ್ನೇಹಿತರ ಜತೆಗೂಡಿ ಬೇರೆ ಬೇರೆ ಕಂಪೆನಿಗಳಿಗೆ ವೆಬ್‌ಸೈಟ್, ಪೋರ್ಟಲ್‌ಗಳನ್ನು ಮಾಡಿಕೊಡ ತೊಡಗಿದ. ಆಗ ಆತನ ಕಂಪೆನಿಯ ಹೆಸರು– ಚೀನಾ ಯೆಲ್ಲೋ ಪೇಜಸ್. 3 ವರ್ಷಗಳಲ್ಲಿ 8 ಲಕ್ಷ ಅಮೆರಿಕನ್ ಡಾಲರ್ ಆದಾಯ ಬಂತು. 1998ರಲ್ಲಿ ಒಂದು ವರ್ಷ ಕಾಲ ಚೀನಾ ಸರ್ಕಾರದ ಐಟಿ ಕಂಪೆನಿಯ ಮುಖ್ಯಸ್ಥನಾಗಿ ಕೆಲಸ ಮಾಡಿದ. ಆದರೆ ಇಂಟರ್‌ನೆಟ್ ವ್ಯಾಪಾರದಲ್ಲಿ ಅತ್ಯಧಿಕ ಲಾಭವಿದೆ ಎನ್ನುವುದನ್ನು ಕಂಡುಕೊಂಡಿದ್ದ ಜಾಕ್‌ಗೆ ಸ್ವಂತ ಕಂಪೆನಿಯ ಹೊಸ ಕನಸು ಚಿಗುರೊಡೆಯಿತು. ಊರಿಗೆ ಮರಳಿ 17 ಮಂದಿ ಸ್ನೇಹಿತರನ್ನು ಒಟ್ಟು ಸೇರಿಸಿ ಕಟ್ಟಿದ ಕಂಪೆನಿಯೇ ಆಲಿಬಾಬಾ ಡಾಟ್‌ಕಾಮ್. ಆರಂಭದಲ್ಲಿ ಗೆಳೆಯರೆಲ್ಲ ಅನುಮಾನ ವ್ಯಕ್ತಪಡಿಸಿದರೂ ಹುಟ್ಟಿದ ಕೆಲವೇ ವರ್ಷಗಳಲ್ಲಿ ಆಲಿಬಾಬಾ ಡಾಟ್ ಕಾಮ್ ಮಾಡಿದ ಬಿಸಿನೆಸ್ ನೋಡಿ ಇಡೀ ಜಗತ್ತೇ ಬೆಚ್ಚಿಬಿದ್ದಿತು.

ಇವತ್ತು ಆಲಿಬಾಬಾ.ಕಾಮ್ ಜಗತ್ತಿನ ಅತಿದೊಡ್ಡ ಇ-ಕಾಮರ್ಸ್ ಕಂಪೆನಿಯಾಗಿ ಬೆಳೆದು ನಿಂತಿದೆ. 99 ಮತ್ತು 2000ದಲ್ಲಿ ಎರಡು ಬಾರಿ ಅಂತರರಾಷ್ಟ್ರೀಯ ಹೂಡಿಕೆದಾರರು ಒಟ್ಟು 25 ದಶಲಕ್ಷ ಡಾಲರ್ ಹೂಡಿದ್ದು ಜಾಕ್ ಮಾ ಮಹತ್ವಾಕಾಂಕ್ಷೆಗೆ ಗರಿ ಮೂಡಿಸಿತು. 5 ಲಕ್ಷ ಯುವಾನ್ (ಚೀನೀ ಕರೆನ್ಸಿ)ನೊಂದಿಗೆ ಆರಂಭಿಸಿದ ಕಂಪೆನಿ, ಇವತ್ತು 240 ದೇಶಗಳಲ್ಲಿ 79 ದಶಲಕ್ಷ ಬಿಸಿನೆಸ್‌ಗಳ ಸದಸ್ಯತ್ವ ಹೊಂದಿದೆ ಎಂದರೆ ಜಾಕ್‌ಗೆ ಹೊಡೆದ ಜಾಕ್‌ಪಾಟ್ ಅರಿವಾದೀತು.

ಈ ಅಕ್ಟೋಬರ್ 10ಕ್ಕೆ 50 ವರ್ಷಕ್ಕೆ ಕಾಲಿಡಲಿರುವ ಜಾಕ್‌ನ ಆಸ್ತಿ ಮೊತ್ತ ಇವತ್ತು 29.7 ಶತಕೋಟಿ ಡಾಲರ್ ದಾಟಿದೆ. ಚೀನಾ (ಹಾಂಕಾಂಗ್ ಬಿಟ್ಟು)ದ ನಂಬರ್ ಒನ್ ಶ್ರೀಮಂತ. ಜಗತ್ತಿನ ಕೋಟ್ಯಧಿಪತಿಗಳ ಪಟ್ಟಿಯಲ್ಲಿ 18ನೇ ಸ್ಥಾನ. ‘ಇನ್ನು 10 ವರ್ಷಗಳಲ್ಲಿ ವಾಲ್‌ಮಾರ್ಟ್ ಕಂಪೆನಿಯನ್ನು ಹಿಂದಿಕ್ಕುತ್ತೇನೆ ನೋಡಿ’ ಎಂದು ಇತ್ತೀಚೆಗೆ ದಾವೋಸ್‌ನಲ್ಲಿ ಈತ ಭಾಷಣ ಮಾಡಿದ್ದಾನೆ. ಕಳೆದ ವರ್ಷ ನ್ಯೂಯಾರ್ಕ್ ಷೇರು ಪೇಟೆಯಲ್ಲಿ ಈತನ ಕಂಪೆನಿಯು ಐಪಿಒ ಮೂಲಕ 25 ಶತಕೋಟಿ ಡಾಲರ್ ಸಂಗ್ರಹಿಸಿ ದಾಖಲೆ ಮಾಡಿದ್ದನ್ನು ಗಮನಿಸಿದರೆ, ಈತನ ಭಾಷಣ ಸುಳ್ಳಾಗಲಿಕ್ಕಿಲ್ಲ ಎನ್ನಿಸುತ್ತದೆ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65